ಸರಿಯಾದುದಲ್ಲ. ಐದು ಪಶುವೈದ್ಯ ಶಾಲೆಗಳು ಇನ್ನು ಬೇಕಾಗಿವೆ. ಈ ವರ್ಷ ಹೊಸದಾಗಿ ಇನ್ನೂರ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯಬೇಕೆಂದು ನಿರ್ಣಯ ಮಾಡುತ್ತಿರುವುದರಿಂದ ಈ ಶಿಫಾರಸ್ಸುಗಳ ಆಧಾರದ ಮೇಲೆ ಪ್ರತಿ ತಾಲ್ಲೂಕಿನಲ್ಲಿ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಪಶುವೈದ್ಯ ಶಾಲೆಯನ್ನು ಈ ವರ್ಷ ತೆರೆಯಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಬರಗಾಲ ಪರಿಸ್ಥಿತಿಯಲ್ಲಿ ದನಕರುಗಳು ಸಾಯುತ್ತಕ್ಕಂಥ ಪರಿಸ್ಥಿತಿ ಇದೆ. ತಾತ್ಕಾಲಿಕವಾಗಿ ಸಂಚಾರಿ ಆಸ್ಪತ್ರೆಗಳನ್ನಾದರೂ ಪ್ರತಿ ತಾಲ್ಲೂಕಿನಲ್ಲಿ ಪ್ರಾರಂಭ ಮಾಡದೇ ಇದ್ದರೆ ತುಂಬಾ ತೊಂದರೆಯಾಗುತ್ತದೆ. ಇದನ್ನು ಮಾಡದೇ ಇದ್ದರೆ ದನಕರುಗಳನ್ನು ಸಾಕುವುದಕ್ಕೆ ಆಗುವುದಿಲ್ಲ. ಸಂಚಾರಿ ಆಸ್ಪತ್ರೆಗಳನ್ನು ಖಂಡಿತವಾಗಿಯೂ ಇಂಟ್ರೊಡ್ಯೂಸ್ ಮಾಡ ಬೇಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.—ಈಗಾಗಲೇ ನಾನು ಹೇಳಿದ್ದೇನೆ. ನಮ್ಮಲ್ಲಿ ಬರಗಾಲ ಇರತಕ್ಕದ್ದನ್ನು ನಿಜವೆಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈಗ ಸಿಬ್ಬಂದಿ ಕೊರತೆ ಇರುವುದರಿಂದ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದರೆ ಬರೇ ಬೋರ್ಡು ಮಾತ್ರ ತಗುಲಿಸಿರಬೇಕಾಗುತ್ತದೆ. ಪಶು ಪರೀಕ್ಷಕರು, ಕಂಪೌಂಡರ್ ಇತ್ಯಾದಿ ಸಿಬ್ಬಂದಿಯವರು ಬೇಕಾಗುತ್ತಾರೆ. ಈಗತಾನೇ ಸಿಬ್ಬಂದಿ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ವರ್ಷ ಎರಡು ನೂರು ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯಬೇಕೆಂದಿದ್ದು, ಸಂಚಾರಿ ಪಶುವೈದ್ಯ ಆಸ್ಪತ್ರೆಗಳನ್ನು ಈ ವರ್ಷ ತೆರೆಯುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ಗೈರುಹಾಜರಿ—ಮಾನ್ಯ ಸದಸ್ಯರಾದ ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ ಗೈರುಹಾಜರಿ.

ಹರಿಹರ ತಾಲ್ಲೂಕಿನ ಭಾನುವಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಗೆ ಗಣಿತಶಾಸ್ತ್ರದ ಶಿಕ್ಷಕರ ನೇಮಕಾತಿ

೧೯೩೭. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯ ವನ್ನು ದಯವಿಟ್ಟು ತಿಳಿಸುವರೇ ?

ಅ) ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗೆ ಇದುವರೆವಿಗೂ ಗಣಿತ ವಿಷಯದ ಬಗ್ಗೆ ಉಪಾಧ್ಯಾಯರನ್ನು ನೇಮಿಸದೇ ಇರಲು ಕಾರಣಗಳೇನು,

ಆ) ಸದರಿ ಶಾಲೆಯ ವಿದ್ಯಾರ್ಥಿಗಳು ಗಣಿತ ವಿಷಯದಲ್ಲಿ ಅನುತ್ತೀರ್ಣರಾದರೆ ಇದರ ಬಗ್ಗೆ ಯಾರ ಮೇಲೆ ಜವಾಬ್ದಾರಿ ಹೊರಿಸಬೇಕು,

ಇ) ಸದರಿ ಶಾಲೆಯಲ್ಲಿ ಟೈಲರಿಂಗ್ ಡಿಪ್ಲೋಮೊ ಕೋರ್ಸನ್ನು ಪ್ರಾರಂಭ ಮಾಡಲು ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದರೂ ಸರ್ಕಾರದವರು ಮಂಜೂರ್ಮಾಡದಿರಲು ಕಾರಣವೇನು,

ಈ) ೧೯೮೬-೮೭ನೇ ಸಾಲಿನಿಂದಲಾದರೂ ಅದನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).

ಅ) ಶಾಲೆಯ ಎಲ್ಲಾ ಹುದ್ದೆಗಳು ಭರ್ತಿಯಾಗಿದ್ದು ವಿಜ್ಞಾನ ಉಪಾಧ್ಯಾಯರುಗಳು ಕೆಲಸ ಮಾಡುತ್ತಿದ್ದಾರೆ ಮತ್ತೆ ಗಣಿತಕ್ಕಾಗಿಯೇ ಬೇರೆ ಉಪಾಧ್ಯಾಯರ ಅವಶ್ಯಕತೆ ಇರುವ ಬಗ್ಗೆ ಶಾಲೆಯ ಮುಖ್ಯಸ್ಥರಿಂದ ಮಾಹಿತಿಯು ಬಂದಿರುವುದಿಲ್ಲ.

ಆ) ಪ್ರಶ್ನೆ (ಅ)ಕ್ಕೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಯಾವುದೇ ಪ್ರಸ್ತಾವನೆಯು ಬಂದಿರುವುದಿಲ್ಲ.

ಈ) ಸಂಬಂಧಪಟ್ಟವರಿಂದ ಪ್ರಸ್ತಾವನೆಯು ಬಂದಲ್ಲಿ ಆ ಬಗ್ಗೆ ಪರಿಶೀಲಿಸಲಾಗುವುದು.